ಕರ್ನಾಟಕ ಸರ್ಕಾರ

ಸಂಖ್ಯೆ: ಡಿಟಿಇ/02/ಇಎಸ್‌ಟಿ(9)2018 | 1124

ನಿರ್ದೇಶಕರವರ ಕಛೇರಿ,
ತಾಂತ್ರಿಕ ಶಿಕ್ಷಣ ಇಲಾಖೆ,
ಬೆಂಗಳೂರು-560 001,
ದಿನಾಂಕ: 05-07-2018

ಹಿಂಬರಹ

ಕರ್ನಾಟಕ ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ/39 ಹೈಕೋ 2018 ದಿನಾಂಕ:21.06.2018 ಪ್ರತಿಯನ್ನು ಮಾಹಿತಿಗಾಗಿ ಈ ಕೆಳಕಂಡವರಿಗೆ ಕಳುಹಿಸಿಕೊಡಲಾಗಿದೆ.

1. ಈ ಇಲಾಖೆಯ ಅಧೀನಕ್ಕೊಳಪಡುವ ಎಲ್ಲಾ ಸರ್ಕಾರಿ/ಅನುದಾನಿತ ಇಂಜಿನಿಯರಿಂಗ್ ಕಾಲೇಜುಗಳು, ಸರ್ಕಾರಿ/ಅನುದಾನಿತ ಪಾಲಿಟೆಕ್ನಿಕ್, ಸರ್ಕಾರಿ ಕಿರಿಯ ತಾಂತ್ರಿಕ ಶಾಲೆಗಳು, ಸ್ಪೆರಿಕ್ ಸಂಸ್ಥೆ ಬೆಂಗಳೂರು, ಸರ್ಕಾರಿ ಗಣಿ ಶಿಕ್ಷಣ ಶಾಲೆ, ಕೆ.ಜಿ.ಎಫ್ ಸಂಸ್ಥೆಗಳ ಪ್ರಿನ್ಸಿಪಾಲರುಗಳಿಗೆ ಮಾಹಿತಿಗಾಗಿ [ಇಲಾಖಾ ವೆಬ್‌ಸೈಟ್ ಮುಖಾಂತರ]
2. ಈ ನಿರ್ದೇಶನಾಲಯದ ಎಲ್ಲಾ ಅಧಿಕಾರಿಗಳಿಗೆ, ಜಂಟಿ ನಿರ್ದೇಶಕರು(ಆಡಳಿತ), ಆಡಳಿತಾಧಿಕಾರಿ, ಸಹಾಯಕ ಆಡಳಿತಾಧಿಕಾರಿ (1), (2) ಹಾಗೂ (3) ಹಾಗೂ ರಿಜಿಸ್ಟ್ರಾರ್ [ಆಡಳಿತ], ಸಾರ್ವಜನಿಕ ಸಂಪರ್ಕಾಧಿಕಾರಿ
3. ಈ ನಿರ್ದೇಶನಾಲಯದ ಇ.ಎಸ್.ಟಿ.(1) ರಿಂದ (10) ವಿಭಾಗಗಳಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ
4. ನಿರ್ದೇಶಕರ ಆಪ್ತ ಶಾಖೆಗೆ
5. ಈ ನಿರ್ದೇಶನಾಲಯದ ಇ-ಆಡಳಿತ ವಿಭಾಗಕ್ಕೆ ಮಾಹಿತಿ ಹಾಗೂ ಮುಂದಿನ ಕ್ರಮಕ್ಕಾಗಿ

ಆಡಳಿತಾಧಿಕಾರಿ

Sh-est(9) Endsmnt

ಕರ್ನಾಟಕ ಸರ್ಕಾರ

ಸಂಖ್ಯೆ: ಸಿಆಸುಇ 39 ಹೈಕಕೋ 2018

ಕರ್ನಾಟಕ ಸರ್ಕಾರ ಸಚಿವಾಲಯ,
ವಿಧಾನ ಸೌಧ,
ಬೆಂಗಳೂರು, ದಿನಾಂಕ: 21.06.2018

## ಸುತ್ತೋಲೆ

ವಿಷಯ: ಅನುಚ್ಛೇದ 371ಜೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಸ್ಥಳೀಯ ವೃಂದ ರಚಿಸಿ, ಅಧಿಸೂಚಿಸಿ, ಖಾಲಿ ಹುದ್ದೆಗಳನ್ನು ತುಂಬುವಲ್ಲಿ ಅನುಸರಿಸಬೇಕಾದ ವಿಧಾನಗಳ ಬಗ್ಗೆ.

********

ಭಾರತೀಯ ಸಂವಿಧಾನಕ್ಕೆ ಅನುಚ್ಛೇದ 371ಜೆ ಸೇರ್ಪಡೆಯಿಂದಾಗಿ ತರಲಾದ ತಿದ್ದುಪಡಿಯಿಂದಾಗಿ ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ವಿಶೇಷ ಸ್ಥಾನಮಾನ ನೀಡಲಾಗಿರುತ್ತದೆ. ಅನುಚ್ಛೇದ 371ಜೆ ಅನುಷ್ಠಾನಕ್ಕೆ ಸಂಬಂಧಿಸಿದಂತೆ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶಕ್ಕೆ ನೇಮಕಾತಿಯಲ್ಲಿ ಮೀಸಲಾತಿ) ಆದೇಶ, 2013ನ್ನು ಹೊರಡಿಸಲಾಗಿರುತ್ತದೆ. ಸದರಿ ಆದೇಶದಂತೆ;

1. ರಾಜ್ಯ ಸರ್ಕಾರವು ಸ್ಥಾಪಿಸಿದ ಮತ್ತು ನಿರ್ವಹಿಸಿದ (ಆದೇಶದ ಕಂಡಿಕೆ 2(1)(ಎ)) ಯಾವುದೇ ಶಾಸನಬದ್ಧ ಅಥವಾ ಶಾಸನಬದ್ಧವಿಲ್ಲದ ನಿಕಾಯ ಅಥವಾ ಸಂಸ್ಥೆಗಳಿಗೆ ಅನ್ವಯಿಸುತ್ತದೆ. ಈ ಹಿನ್ನೆಲೆಯಲ್ಲಿ, ಸಚಿವಾಲಯದ ವಿವಿಧ ಆಡಳಿತ ಇಲಾಖೆಗಳ ಅಡಿಯಲ್ಲಿ ಬರುವಂತಹ ವಿವಿಧ ಕ್ಷೇತ್ರ ಇಲಾಖೆಗಳು/ನಿಗಮ/ಮಂಡಳಿಗಳು/ ವಿಶ್ವವಿದ್ಯಾಲಯಗಳು/ಸ್ವಾಯತ್ತ ಸಂಸ್ಥೆಗಳು/ಪೌರ ಸಂಸ್ಥೆಗಳು/ಪಂಚಾಯತ್ ರಾಜ್ ಸಂಸ್ಥೆಗಳ ನೇಮಕಾತಿ ಪ್ರಾಧಿಕಾರಿಗಳು ಸದರಿ ಆದೇಶದ ವ್ಯಾಪ್ತಿಗೊಳಪಟ್ಟಿದ್ದು, ಆದೇಶ ಹೊರಡಿಸಿದ 3 ತಿಂಗಳುಗಳೊಳಗಾಗಿ ಹುದ್ದೆಗಳನ್ನು ಗುರುತಿಸಿ, ಅನ್ವಯಿಸುವ ಮೀಸಲಾತಿ ನಿಗದಿಪಡಿಸಿ, ಮೀಸಲಾತಿಗೊಳಪಡುವ ಹುದ್ದೆಗಳನ್ನೊಳಗೊಂಡ ಸ್ಥಳೀಯ ವೃಂದ ರಚಿಸಿ, ಅಧಿಸೂಚಿಸಬೇಕಾಗಿರುತ್ತದೆ.
2. ಅನುಚ್ಛೇದ 371ಜೆ ಅಡಿಯಲ್ಲಿ ನಿಗದಿಪಡಿಸಲಾದ ಮೀಸಲಾತಿಯು ನೇರ ನೇಮಕಾತಿ ಹಾಗೂ ಮುಂಬಡ್ತಿ ಹುದ್ದೆಗಳಿಗೆ ಅನ್ವಯಿಸುತ್ತಿದ್ದು, ಮೀಸಲಾತಿಗೊಳಪಡುವ ಹುದ್ದೆಗಳನ್ನೊಳಗೊಂಡ ಸ್ಥಳೀಯ ವೃಂದ ರಚಿಸಿ, ಅಧಿಸೂಚಿಸಬೇಕಿರುವ ಹಿನ್ನೆಲೆಯಲ್ಲಿ, ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿನ ಎಲ್ಲಾ ಪದನಾಮದ ಹುದ್ದೆಗಳಿಗೆದುರಾಗಿ ಅನ್ವಯಿಸುವ ಮೀಸಲಾತಿ ನಿಗದಿಪಡಿಸಬೇಕಿರುತ್ತದೆ.
3. ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ನೆಲೆಸಿರುವ ಕಛೇರಿಗಳಲ್ಲಿ ಲಭ್ಯವಿರುವ ವಿವಿಧ ಪದನಾಮಾವಾರು ಹುದ್ದೆಗಳಿಗೆ ಸಂಬಂಧಿಸಿದಂತೆ ಪ್ರಾದೇಶಿಕ ಮಟ್ಟದ ಮೀಸಲಾತಿ (ವಿವಿಧ ಪದನಾಮದ ಹುದ್ದೆಗಳಿಗೆ ಶೇಕಡ 75ರಂತೆ ಗ್ರೂಪ್-ಎ ಮತ್ತು ಬಿ ಹುದ್ದೆಗಳಿಗೆ, ಶೇಕಡ 80ರಂತೆ ಗ್ರೂಪ್-ಸಿ ಹುದ್ದೆಗಳಿಗೆ ಹಾಗೂ ಶೇಕಡ 85ರಂತೆ ಗ್ರೂಪ್-ಡಿ ಹುದ್ದೆಗಳಿಗೆ) ಹಾಗೂ ಹೈದ್ರಾಬಾದ್-ಕರ್ನಾಟಕ ಪ್ರದೇಶವನ್ನೊರತುಪಡಿಸಿ ರಾಜ್ಯದ ಇತರೆ ಪ್ರದೇಶಗಳಲ್ಲಿ ನೆಲೆಸಿರುವ ರಾಜ್ಯ ಮಟ್ಟದ ಕಛೇರಿ/ಸಂಸ್ಥೆ ಎಂದು ಗುರುತಿಸಲು ಅರ್ಹತೆ ಹೊಂದಿರುವ ಕಛೇರಿಗಳಲ್ಲಿ ಶೇಕಡ 8ರಂತೆ (ವಿವಿಧ ಪದನಾಮದ ಹುದ್ದೆಗಳಿಗೆ ಗ್ರೂಪ್-ಎ, ಬಿ, ಸಿ ಮತ್ತು ಡಿ ಹುದ್ದೆಗಳಿಗೆ) ರಾಜ್ಯ ಮಟ್ಟದ ಮೀಸಲಾತಿ ನಿಗದಿಪಡಿಸಿ, ಮೀಸಲಾತಿಗೊಳಪಡುವ ಹುದ್ದೆಗಳನ್ನೊಳಗೊಂಡ ಪ್ರಾದೇಶಿಕ ಮಟ್ಟದ/ರಾಜ್ಯ ಮಟ್ಟದ/ರಾಜ್ಯವ್ಯಾಪಿ ಸ್ಥಳೀಯ ವೃಂದ ರಚಿಸಿ, ಅಧಿಸೂಚಿಸಬೇಕಿರುತ್ತದೆ.

JD(Ad)
BRTGHA/Reg(Ad)
EST 4A, 4B

4. ನೇರ ನೇಮಕಾತಿಯಿಂದ ತುಂಬುವ ವಿವಿಧ ಪದನಾಮದ ಎಲ್ಲಾ ಹುದ್ದೆಗಳು ಮೀಸಲಾತಿಗೊಳಪಡುತ್ತವೆ. ಆದರೆ, ಮುಂಬಡ್ತಿಗೊಳಪಡುವ ಹುದ್ದೆಗಳಿಗೆ ಸಂಬಂಧಿಸಿದಂತೆ ಮೀಸಲಾತಿಯು ಗ್ರೂಪ್-ಎ ಕಿರಿಯ ಶ್ರೇಣಿ ವೃಂದದ ಹುದ್ದೆಗಳವರೆವಿಗೂ ಮಾತ್ರ ಅನ್ವಯಿಸುತ್ತದೆ.
5. ಅನುಚ್ಛೇದ 371ಜೆ ಅಡಿಯಲ್ಲಿ ನೀಡಲಾಗುವ ಮೀಸಲಾತಿಯು ಖಾಯಂ, ತಾತ್ಕಾಲಿಕ, ಗುತ್ತಿಗೆ, ನಿಯೋಜನೆ ಹಾಗೂ ಹೊರಗುತ್ತಿಗೆ ಮೇಲೆ ತುಂಬುವ ಹುದ್ದೆಗಳಿಗೆ ಅನ್ವಯಿಸುತ್ತದೆ. ವೃಂದ ಮತ್ತು ನೇಮಕಾತಿ ನಿಯಮಗಳಂತೆ ನಿಯೋಜನೆಗೊಳಪಡುವ ಎಕ್ಸ್-ಕೇಡರ್ ಹಾಗೂ ಎನ್-ಕೇಡರ್ ಹುದ್ದೆಗಳನ್ನೂ ಸಹ ಗಣನೆಗೆ ತೆಗೆದುಕೊಂಡು, ಅನ್ವಯಿಸುವ ಮೀಸಲಾತಿ ನಿಗದಿಪಡಿಸಬೇಕಿರುತ್ತದೆ. ಮೀಸಲಾತಿಗೊಳಪಡುವ ಹುದ್ದೆಗಳನ್ನು ಸ್ಥಳೀಯ ವ್ಯಕ್ತಿಯೆಂದು ಅರ್ಹತೆ ಹೊಂದಿರುವ (ಆದೇಶದ ಕಂಡಿಕೆ 6ರಂತೆ) ಅಭ್ಯರ್ಥಿಗಳಿಂದಲೇ ತುಂಬಬೇಕಾಗುತ್ತದೆ.
6. ನಿಯೋಜನೆ ಮೇಲೆ ತುಂಬುವ ಹುದ್ದೆಗಳಿಗೆ ಸಂಬಂದಿಸಿದಂತೆ ನಿಗದಿಪಡಿಸಲಾದ ಮೀಸಲಾತಿ ಹುದ್ದೆಗಳನ್ನು ಹೈದ್ರಾಬಾದ್-ಕರ್ನಾಟಕ ಪ್ರದೇಶದ ಅರ್ಹ ಸ್ಥಳೀಯ ನೌಕರರಿಂದಲೇ ತುಂಬಬೇಕಾಗಿದ್ದು, ನಿಯೋಜನೆ ನೀಡುವ ಸಂಸ್ಥೆಯು ನಿಯೋಜನೆಗೊಳ್ಳುವ ನೌಕರರು ಹೈದ್ರಾಬಾದ್-ಕರ್ನಾಟಕ ಪ್ರದೇಶದ ಸ್ಥಳೀಯ ವ್ಯಕ್ತಿಗಳೆಂದು ಖಾತ್ರಿಪಡಿಸಿಕೊಂಡ ನಂತರವೇ ನಿಯೋಜನೆ ಆದೇಶವನ್ನು ಹೊರಡಿಸತಕ್ಕದ್ದು.
7. ಸಾರ್ವಜನಿಕ ಉದ್ಯೋಗ ಆದೇಶದ ಕಂಡಿಕೆ 10(4)ರಂತೆ ಎಲ್ಲಾ ತಾತ್ಕಾಲಿಕ ಹುದ್ದೆಗಳಿಗೂ ಹಾಗೂ ಗುತ್ತಿಗೆ ಆಧಾರದ ಮೇಲೆ ತುಂಬುವಂತಹ ಹುದ್ದೆಗಳಿಗೂ ಸಹ ಅನ್ವಯಿಸುವ ಮೀಸಲಾತಿ ನಿಗದಿಪಡಿಸಬೇಕಾಗುತ್ತದೆ.
8. ಮುಂದುವರೆದು, ಸಾರ್ವಜನಿಕ ಉದ್ಯೋಗ ಆದೇಶದ ಕಂಡಿಕೆ 10(5)ರಂತೆ ಮಾನವ ಶಕ್ತಿಯನ್ನು ಹೊರಗುತ್ತಿಗೆ ಆಧಾರದ ಮೇಲೆ ಪಡೆಯುವಲ್ಲಿಯೂ ಸಹ ಅನುಚ್ಛೇದ 371ಜೆ ನಂತೆ ಅನ್ವಯಿಸುವ ಮೀಸಲಾತಿ ನಿಗದಿಪಡಿಸಬೇಕಾಗುತ್ತದೆ.
9. ಸ್ಥಳೀಯ ವೃಂದದಲ್ಲಿನ ಮೀಸಲಾತಿಗೊಳಪಡುವ ಹುದ್ದೆಗಳನ್ನು ಮೊದಲಿಗೆ ಸ್ಥಳೀಯ ಪ್ರದೇಶದಲ್ಲಿ (ತಾಲ್ಲೂಕು/ಜಿಲ್ಲೆ/ವಿಭಾಗ) ಕಾರ್ಯನಿರ್ವಹಿಸುತ್ತಿರುವ ಸ್ಥಳೀಯ ವ್ಯಕ್ತಿಯೆಂದು (ಆದೇಶದ ಕಂಡಿಕೆ 6(1)(ಇ)ನಂತೆ) ಅರ್ಹತೆ ಹೊಂದಿರುವ ಅಭ್ಯರ್ಥಿಗಳಿಂದಲೇ ತುಂಬಬೇಕು. ಹಂಚಿಕೆಯ ಪ್ರಕ್ರಿಯೆಯಲ್ಲಿ ಸ್ಥಳೀಯ ವೃಂದಕ್ಕೆ ಆಯ್ಕೆ ಚಲಾಯಿಸಿದ ಸಾಕಷ್ಟು ಸ್ಥಳೀಯ ಭಾಗದ ಅಭ್ಯರ್ಥಿಗಳು ಲಭ್ಯವಿಲ್ಲದಿದ್ದ ಸಂದರ್ಭದಲ್ಲಿ ರಾಜ್ಯದ ಇತರೆ ಭಾಗದಲ್ಲಿನ ಸ್ಥಳೀಯ ವ್ಯಕ್ತಿಯೆಂದು ಅರ್ಹತೆ ಹೊಂದಿ, ನಿಗದಿತ ಸಮಯದಲ್ಲಿ ಸ್ಥಳೀಯ ವೃಂದ ಸೇರುವ ಬಗ್ಗೆ ಆಯ್ಕೆ ಚಲಾಯಿಸಿದ ರಾಜ್ಯದ ಇತರೆ ಭಾಗದ ಸ್ಥಳೀಯ ಅಭ್ಯರ್ಥಿಗಳಿಗೆ ಮಾತ್ರ ಅವಕಾಶ ನೀಡುವುದು. ತದನಂತರ ಉಳಿದ ಹುದ್ದೆಗಳನ್ನು ಸ್ಥಳೀಯ ವ್ಯಕ್ತಿಯೆಂದು ಅರ್ಹತೆ ಹೊಂದಿರುವ ಅಭ್ಯರ್ಥಿಗಳಿಂದಲೇ ನೇರ ನೇಮಕಾತಿ, ಮುಂಬಡ್ತಿ ಹಾಗೂ ನಿಯೋಜನೆ ಮುಖೇನ ತುಂಬಬೇಕು.
10. ಮೇಲೆ ತಿಳಿಸಲಾದ ವಿಧಾನಗಳನ್ನು ಚಾಚೂ ತಪ್ಪದೆ ಅನುಸರಿಸುವುದು. ಇಲ್ಲವಾದಲ್ಲಿ ತಪ್ಪಿತಸ್ಥ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮ ಜರುಗಿಸಲಾಗುವುದು.

(ಕೆ. ರತ್ನಪ್ರಭ)
ಸರ್ಕಾರದ ಮುಖ್ಯ ಕಾರ್ಯದರ್ಶಿಗಳು

<u>ಪ್ರತಿ:</u>

1. ಸರ್ಕಾರದ ಎಲ್ಲಾ ಅಪರ ಮುಖ್ಯ ಕಾರ್ಯದರ್ಶಿಗಳು/ಪ್ರಧಾನ ಕಾರ್ಯದರ್ಶಿಗಳು/ಕಾರ್ಯದರ್ಶಿಗಳ
2. ಎಲ್ಲಾ ಇಲಾಖಾ ಮುಖ್ಯಸ್ಥರು.
3. ಎಲ್ಲಾ ಪ್ರಾದೇಶಿಕ ಆಯುಕ್ತರು.

..........3

4. ಕಾರ್ಯದರ್ಶಿಗಳು, ಕರ್ನಾಟಕ ಲೋಕಸೇವಾ ಆಯೋಗ, ಬೆಂಗಳೂರು.
5. ಆಡಳಿತಾಧಿಕಾರಿಗಳು, ಕರ್ನಾಟಕ ಪರೀಕ್ಷಾ ಪ್ರಾಧಿಕಾರ, 18ನೇ ಅಡ್ಡರಸ್ತೆ, ಸಂಪಿಗೆ ರಸ್ತೆ, ಮಲ್ಲೇಶ್ವ ಬೆಂಗಳೂರು.
6. ವ್ಯವಸ್ಥಾಪಕ ನಿರ್ದೇಶಕರು, ಪೋಲೀಸ್ ಹೌಸಿಂಗ್ ಕಾರ್ಪೋರೇಷನ್.
7. ಎಲ್ಲಾ ಜಿಲ್ಲಾಧಿಕಾರಿಗಳು.
8. ಎಲ್ಲಾ ಉಪವಿಭಾಗಾಧಿಕಾರಿಗಳು.
9. ಎಲ್ಲಾ ನಿಗಮ/ಮಂಡಳಿಗಳ ಮುಖ್ಯಸ್ಥರುಗಳು.
10. ಶಿಕ್ಷಣ ಇಲಾಖೆಯ ಎಲ್ಲಾ ಹೆಚ್ಚುವರಿ ಆಯುಕ್ತರುಗಳು.
11. ಹೈದ್ರಾಬಾದ್-ಕರ್ನಾಟಕ ಪ್ರದೇಶದ ಎಲ್ಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರುಗಳು.
12. ಎಲ್ಲಾ ಇನ್ಸ್‌ಪೆಕ್ಟರ್ ಜನರಲ್ ಆಫ್ ಪೋಲೀಸ್, ಈಶಾನ್ಯ ವಲಯ.
13. ಹೈದ್ರಾಬಾದ್-ಕರ್ನಾಟಕ ಪ್ರದೇಶದ ಎಲ್ಲಾ ಪೋಲೀಸ್ ವರಿಷ್ಠಾಧಿಕಾರಿಗಳು.
14. ಎಲ್ಲಾ ವಿಶ್ವವಿದ್ಯಾಲಯಗಳ ಕುಲಸಚಿವರುಗಳು.
15. ಹೈದ್ರಾಬಾದ್-ಕರ್ನಾಟಕ ಪ್ರದೇಶದ ಎಲ್ಲಾ ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು.
16. ಹೈದ್ರಾಬಾದ್-ಕರ್ನಾಟಕ ಪ್ರದೇಶದ ಎಲ್ಲಾ ಸಹಾಯಕ ಆಯುಕ್ತರುಗಳು.
17. ಹೆಚ್ಚುವರಿ ಪ್ರತಿ / ಶಾಖಾ ರಕ್ಷಾ ಕಡತ.